**ದಿನಾಂಕ: 13.02.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್ ವಿ ಎಂ ವಕೀಲರಿಂದಃ**

ನನ್ನ ತಂದೆ ಮೂಲತಃ ಬಸಾಪೂರ ಎಂ ನೀಡಸಂಗಿ ಗ್ರಾಮವಾಗಿರುತ್ತದೆ. ನನ್ನ ತಂದೆಗೆ ಒಟ್ಟು ಮೂರು ಜನ ಮಕ್ಕಳುಗಳಿದ್ದೇವೆ. ಅವರುಗಳೆಂದರೆ ನಾನು, ಆದರ್ಶ ಮತ್ತು ಹರೀಶ ಎಂಬುವವರಾಗಿರುತ್ತೇವೆ. ನಾನು ಐ ಟಿ ಐ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಎಸ್ ಎನ್ ಎಸ್ ಏಜನ್ಸಿಯಲ್ಲಿ ಕರ್ತವ್ಯ ಮಾಡುತ್ತಿದ್ದೇನೆ. ಅದು ಸೋಲಾರ್ ಕಂಪನಿಯಾಗಿದ್ದು ಹಾನಗಲ್ ನಲ್ಲಿ ಇದೆ. ಆ ಎಸ್ ಎನ್ ಎಸ್ ಏಜನ್ಸಿಯನ್ನು ಲಕ್ಷ್ಮಣ ವರ್ದಿಯವರು ವಹಿಸಿಕೊಂಡಿರುತ್ತಾರೆ. ನಾನು ಕಳೆದ 5 ರಿಂದ 6 ವರ್ಷಗಳಿಂದ ಲಕ್ಷ್ಮಣ ವರ್ದಿಯವರ ಕೆಲಸ ಮಾಡುತ್ತಿದ್ದೇನೆ. ನನ್ನ ಕಾಲೇಜು ವಿದ್ಯಾಭ್ಯಾಸ ಮುಗಿದ ನಂತರ ಆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಆ ಕಂಪನಿಯಲ್ಲಿ 18 ರಿಂದ 20 ಸಾವಿರ ಸಂಬಳ ಬರುತ್ತದೆ. ಆ ಕಂಪನಿಯಲ್ಲಿ ನಾನು ಫೀಲ್ಡ ವರ್ಕ್ ಮಾಡುತ್ತಿದ್ದೇನೆ. ನಾನು ಆ ಕಂಪನಿಯಲ್ಲಿ ಕೆಲಸ ಮಾಡುತ್ತಿಲ್ಲ ಮತ್ತು ನನಾು ಯಾವುದೇ ಸಂಬಳ ಪಡೆಯುತ್ತಿಲ್ಲ ಎಂದರೆ ಸರಿಯಲ್ಲ.

2. ಕಳೆದ 2 ರಿಂದ 3 ವರ್ಷಗಳಿಂದ ನಾನು ಉಡುಪಿಯಲ್ಲಿ ವಾಸವಾಗಿದ್ದೇನ ಎಂರೆ ಸರಿಯಲ್ಲ ಸಾಕ್ಷಿಯು ನಾನು ವಿದ್ಯಾಭ್ಯಾಸ ಮಾಡುವ ಸಂಡರ್ಭದಲ್ಲಿ ಉಡುುಯಲ್ಲಿ ವಾಸವಾಗಿದ್ದೆ ಎಂದು ಸ್ವತಃ ನುಡಿಯುತ್ತಾರೆ. ನಾನು ಉಡುಪಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರಲಿಲ್ಲ ಬದಲಾಗಿ ದುಡಿಯಲು ಹೋಗಿದ್ದೇನು. ನಾನು ಯಾವ ವರ್ಷ 2 ತಂಗಳುಗಳ ಕಾಲ ಉಡಪಿಯಲ್ಲಿದ್ದೇನು ಎಂದು ಈಗ ಹೇಳಲಾಗುವುದಿಲ್ಲ. ನನ್ನ ಹೆಸರಿನಲ್ಲಿ ಆರ್ ಟಿ ಓ ಹಾವೇರಿ ಕಚೇರಿಯಲ್ಲಿ ಒಂದು ಹಳದಿ ಬೋರ್ಡ ಕಾರನ್ನು ನೋಂದಾಯಿಸಲಾಗಿರುತ್ತದೆ. ಕಳೆದ 6 ವರ್ಷಗಳಿಂದ ಆ ಕಾರ್ ನನ್ನ ಹೆಸರಿನಲ್ಲಿ ನೋಂದಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಕಳೆದ 6 ತಿಂಗಳುಗಳಿಂದ ಮಾತ್ರ ನೋಂದಾಗಿತ್ತು ಎಂದು ಸ್ವತಃ ನುಡಿಯುತ್ತಾರೆ ನಾನು ನಮ್ಮ ಊರಿನ ಶಶಿಧರ ಕಮಾಟಿ ಮತ್ತು ಯಳ್ಳೂರಿನ ಮಂಜುನಾಥ ಬೆಳಗಾಲ ರವರ ಕಾರಗಳನ್ನು ಓಡಿಸುತ್ತೇನೆ. ನಾನು 18 ವರ್ಷವನಾದ ನಂತರ ಆರ್ ಟಿ ಓ ಹಾವೇರಿರವರಲ್ಲಿ ಎಲ್ ಎಂ ವಿ ಚಾಲನಾ ಪರವಾನಿಗೆ ಹೊಂದಿದ್ದು ಇಂದಿಗೂ ಸಹ ಅದು ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸರಿ. ನಾನು ಕಾರ್ ಚಲಾಯಿಸಲು ಚಾಲನಾ ಪರವಾನಿಗೆಯನ್ನು ಪಡೆದುಕೊಂಡಿರುತ್ತೇನೆ. 2018 ರ ನಂತರ ನಾನು ಕಾರ್ ಚಾಲಕನಾಗಿ ಕೆಲಸ ಮಾಡುತ್ತಾ

-6-

ಬಂದಿರುತ್ತೇನೆ. ನಾನು ಕಾರ್ ಚಾಲಕನಾಗಿ ಕೆಲಸ ಮಾಡಿಕೊಂಡು ಉಡುಪಿಯಲ್ಲಿ ಇದ್ದೇನು ಎಂದರೆ ಸರಿ. ನಾನು 2021 ರಿಂದ 2023 ರವರೆಗೆ ನಾನು ಉಡುಪಿಯಲ್ಲಿ ಚಾಲಕ ಕೆಲಸ ಮಾಡುತ್ತಿದ್ದೇ ಎಂದರೆ ಸರಿಯಲ್ಲ. ಸಾಕ್ಷಿಯು ಕೇವಲ 2 ತಿಂಗಳು ಮಾತ್ರ ಮಾಡಿಕೊಂಡಿದ್ದೇನು ಎಂದು ಸ್ವತಃ ನುಡಿಯುತ್ತಾರೆ. ನನಗೆ ಚಾಲಕ ವೃತ್ತಿಯಿಂದ ತಿಂಗಳಿಗೆ 20 ರಿಂದ 30 ಸಾವಿರ ಗಳಿಸುತ್ತೇನೆ ಆದರೆ ಯಾರ ಕಾರು ಎಂಬುದು ನನಗೆ ಗೊತ್ತಿಲ್ಲ. ನಾನು ಈಗಲೂ ಸಹ ಕಾರ್ ಚಾಲಕನಾಗಿ ಕೆಲೀ ಮಾಡುತ್ತೇನೆ ಎಂದರೆ ಸರಿ ಸಾಕ್ಷಿಯು ಎಸ್ ಎನ್ ಎಸ್ ಕಂಪನಿಯಲ್ಲಿಯೂ ಸಹ ಕೆಲಸ ಮಾಡುತ್ತೇನೆ ಎಂದು ಸ್ವತಃ ನುಡಿಯುತ್ತಾರೆ. ನಾನು ನನ್ನ ಹೆಸರಿನಲ್ಲಿರುವ ಹಳದಿ ಬೋರ್ಡ್ ಕಾರ ನಲ್ಲಿ ಬಾಡಿಗೆಗೆ ಕಾರ್ ಓಡಿಸುವ ಕೆಲಸ ಮಾಡುತ್ತೇನೆ. ಆ ಕಾರ್ ಗಳಲ್ಲಿ ಬಾಡಿಗೆಗೆ ಬಂದ ಸಂದರ್ಭದಲ್ಲಿ ಮಾತ್ರ ಕೆಲಸ ಮಾಡುತ್ತೇನೆ ನನ್ನ ಸಹೋದರ ಆದರ್ಶ ರವರು ಸಹ ಹಾನಗಲ್ ನ ಎನ್ ಜೆ ಸಿ ಕಾಲೇಜನಲ್ಲಿ ಪದವಿ ವಿದ್ಯಾಬ್ಯಾಸ ಮಾಡುತ್ತಿದ್ದಾನೆ. ಮತ್ತೊಬ್ಬ ತಮ್ಮ ಹರೀಶರವರು ಅಲ್ಯೂಮೀನಿಯಂ ಪ್ಯಾಬ್ರಿಕೇಷನ್ ಕೆಲಸವನ್ನು ಹಾನಗಲ್ ನಲ್ಲಿ ಮಾಡುತ್ತಿದ್ದಾರೆ. ನನ್ನ ತಮ್ಮ ಆದರ್ಶರವರು ಕಬಡ್ಡಿ ಆಟಗಾರರಾಗಿರುತ್ತಾರೆ. ನನ್ನ ತಮ್ಮ ಆದರ್ಶರವರು ಕ್ಬಡ್ಡಿ ಆಟಗಾರರಾಗಿ ಸಾಯಿ ಸ್ಪೋರ್ಟ ಗೆ 2020-21 ನೇ ಸಾಲಿನಲ್ಲಿ ಆಯ್ಕೆ ಆಗಿದ್ದರು ಎಂದರೆ ಸರಿ. ಆರೋಪಿ ಮಾರನಬೀಡ ಗ್ರಾಮದವಾಗಿದ್ದು ವ್ಯವಸಾಯ ಮತ್ತು ವ್ಯಾಪಾರ ಮಾಡುತ್ತಾರೆ. ಆರೋಪಿ ನನಗೆ 5 ವರ್ಷಗಳಿಂದ ಪರಿಚಯಸ್ಥನಾಗಿದ್ದು ಆತನ ಬಗ್ಗೆ ಎಲ್ಲಾ ಮಾಹಿತಿ ಇದೆ.

3. ಆರೋಪಿ 2019 ರಿಂದ 2021 ರವರೆಗೆ ಧಾರವಾಡದ ಸಪ್ತಾಪುರ ಬಡವಾಣೆಯಲ್ಲಿ ರೂಮ್ ಬಾಡಿಗೆಗೆ ಮಾಡಿಕೊಂಡು ಕಾಲೇಜು ಹೋಗುತ್ತಿದ್ದರು ಎಂದರೆ ಸರಿ. ಆರೋಪಿ ಈಗ ಏನು ವಿದ್ಯಾಬ್ಯಾಸ ಮಾಡಿ ಏನು ಉದ್ಯೋಗದಲ್ಲಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಬಿ ಎಸ್ಸಿ ಪದವಿದರನಾಗಿದ್ದು ಹುಬ್ಬಳ್ಳಿಯಲ್ಲಿ ನೌಕರಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಹೆಸರಿನಲ್ಲಿ ಮಾರನಬೀಡ ಗ್ರಾಮದಲ್ಲಿ ಎಷ್ಟು ಎಕರೆ ಜಮೀನು ಇದೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಏನು ವ್ಯಾಪಾರ ಮಾಡುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ವ್ಯಾಪಾರ ಮಾಡುತ್ತಾರೆ ಎಂಬ ವಿಚಾರವನ್ನು ಆ ಗ್ರಾಮದವರು ನನಗೆ ತಿಳಿಸಿದರು.ಆದರೆ ಏನು ವ್ಯಾಪಾರ ಮಾಡುತ್ತಾನೆ ಎಂಬುದು ನನಗೆ ಗೊತ್ತಿಲ್ಲ. ಆರೋಪಿ ಬಿ ಎಸ್ಸಿ ಪದವಿಧರನಾಗಿದ್ದು ಇನ್ನೂ ಸಹ ಅವಿವಾಹಿತನಾಗಿದ್ದು ಹುಬ್ಬಳ್ಳಿಯಲ್ಲಿ ನೌಕರಿ ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. ನಾನು ನನ್ನ ದೂರಿನಲ್ಲಿ ಮತ್ತು ನೋಟಿಸನಲ್ಲಿ ಆರೋಪಿ ಬಹಳ

ವರ್ಷಗಳಿಂದ ಪರಿಚಯಸ್ಥ ಎಂದು ಬರೆಸಿರುವುದಿಲ್ಲ ಆದರೆ 4 ರಿಂದ 45 ವರ್ಷಗಳಿಂದ ಪರಿಚಯಸ್ಥ ಎಂದು ಬರೆಸಿರುತ್ತೇನೆ. ನಾನು ಈ ಹಿಂದ 2 ರಿಂದ 3 ಬಾರಿ ಆರೋಪಿಗೆ ಹಣ ಕೊಟ್ಟು ವಾಪಸ್ಸು ಪಡೆದುಕೊಂಡಿರುತ್ತೇನೆ ಆದರೆ ದಿನಾಂಕ ನನಗೆ ಈಗ ನೆನಪಿರುವುದಿಲ್ಲ. ಅದೇ ರೀತಿ ಎಷ್ಟು ಹಣ ಈ ಹಿಂದೆ ಸಾಲವಾಗಿ ಕೊಟ್ಟಿರುತ್ತೇನೆಂಬುದು ನನಗೆ ಈಗ ನೆನಪಿಲ್ಲ. ನಾನು ಆದಾಯ ತೆರಿಗೆ ಪಾವತಿದಾರನಾಗಿರುವುದಿಲ್ಲ. ಆರೋಪಿ ಯಾವ ದಿನಾಂಕ ಮತ್ತು ತಿಂಗಳು ನನ್ನನ್ನು ಹಣ ಕೇಳಿದರು ಎಂಬುದು ನನಗೆ ಈಗ ನೆನಪಿಲ್ಲ. ಆರೋಪಿ ಮೊದಲು ನನ್ನ ತಂದೆಯವರನ್ನು ಭೇಟಿಯಾಗಿ ಆ ನಂತರ ನನ್ನ ಬಳಿ ಹಣ ಕೇಳಿರುತ್ತಾರೆ. ನಾನು ನವೆಂಬರ್ 2022 ರ ಮೊದಲನೇ ವಾರದಂದು ರೂ. 7 ಲಕ್ಷ 10 ಸಾವಿರ ಹಣವನ್ನು ಕೊಟ್ಟಿರುತ್ತೇನೆ. ನಾನು ಕೆಲಸ ಮಾಡಿ ಉಳಿಸಿದ ಹಣ, ಬೇರೆಯವರಿಂದ ಸ್ವಲ್ಪ ಹಣ ಸಾಲ ಮಾಡಿ, ನನ್ನ ತಂದೆ ಮತ್ತು ತಮ್ಮಂದಿರು ದುಡಿದು ಹಣ ನೀಡಿದ್ದು ಅವುಗಳಿಂದ ಆರೋಪಿಗೆ ಹಣ ಕೊಟ್ಟಿರುತ್ತೇನೆ. ನಾನು ಕೆಲಸ ಮಾಡುವ ಸ್ಥಳದಲ್ಲಿ ರೂ. 3 ಲಕ್ಷ ಹಣವನ್ನು ನಗದು ರೂಪದಲ್ಲಿಯೇ ಪಡೆದುಕೊಂಡಿದ್ದೇನು. ನಾನು ಧರ್ಮಸ್ಥಳದ ಸಂಘದವರಿಂದ ರೂ. 2 ಲಕ್ಷ 50 ಸಾವಿರ ಹಣವನ್ನು ಸಾಲವಾಗಿ ಪಡೆದಿರುತ್ತೇನೆ. ಧರ್ಮಸ್ಥಳ ಸಂಘದವರಿಂದ ಆಗಸ್ಟ 2022 ರಂದು ರೂ. 2 ಲಕ್ಷ 50 ಸಾವಿರ ಹಣ ಪಡೆದಿರುತ್ತೇನೆ. ಧರ್ಮಸ್ಥಳ ಸಂಘದವರು ಸಾಲಗಾರರ ಸ್ಥಿತಿಗತಿಗಳನ್ನು ನೋಡಿ ರೂ. 25 ಸಾವಿರ ಹಣವನ್ನು ಸಾಲವಾಗಿ ಕೊಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮೊದಲು 10 ಸಾವಿರ ನಂತರ 20 ಸಾವಿರದಂತೆ ಎರಡೂವರೆ ಲಕ್ಷದ ವರೆಗೂ ಸಾಲ ಕೊಡುತ್ತಾರೆ ಎಂದು ಸ್ವತಃ ನುಡಿಯುತ್ತಾರೆ. ನಾನು ಆ ಹಣವನ್ನು 6 ತಿಂಗಳು ಮತ್ತು 1 ವರ್ಷ ಬಿಟ್ಟು ತೆಗೆದುಕೊಂಡಿರುತ್ತೇನೆ. ಆರೋಪಿ ಹಣ ಕೇಳುವದಕ್ಕಿಂತ 2 ತಿಂಗಳ ಮೊದಲು ಧರ್ಮಸ್ಥಳ ಸಂಘದವರಿಂದ ಸಾಲ ಪಡೆದುಕೊಂಡಿದ್ದೇನು. ನಾನು ಎಸ್ ಎನ್ ಎಸ್ ಏಜನ್ಸಿಯವರಿಂದ ಮತ್ತು ಧರ್ಮಸ್ಥಳ ಸಂಘದವರಿಂದ ಸಾಲ ಪಡೆದ ಬಗ್ಗೆ ದಾಖಲೆಗಳನ್ನು ಇರುವುದಿಲ್ಲ. ಆರೋಪಿ ತಾನು ಬೇರೆ ಕಡೆ ಸಾಲ ತಿರಿಸುವ ಸಲುವಾಗಿ ಸಾಲ ಬೇಕು ಎಂದು ಕೇಳಿದರು. ನಾನು ಯಾರ ಕಡೆ ಸಾಲ ಮಾಡಿದೆ ಎಂದು ಆರೋಪಿಯನ್ನು ವಿಚಾರಣೆ ಮಾಡಿರುವುದಿಲ್ಲ. ನನಗೆ ಕನ್ನ ಮತ್ತು ಇಂಗ್ಲೀಷ ಓದಲು ಮತ್ತು ಬರೆಯಲು ಬರುತ್ತದೆ. ಈಗ ತೋರುತ್ತಿರುವ ನಿಪಿ-1 ರಲ್ಲಿರುವ ಬರವಣಿಗೆ ನನ್ನದಾಗಿರುವುದಿಲ್ಲ. ಈಗ ತೋರುತ್ತಿರುವ ಆರೋಪಿಯ ವಕಾಲತ್ ನಾಮೆಯಲ್ಲಿರುವ ಸಹಿ ಆರೋಪಿಯದ್ದಾಗಿರುವುದಿಲ್ಲ. ಆದರೆ ನಿಪಿ-1 ರಂತಹ ಚೆಕ್ ನಲ್ಲಿರುವ ಸಹಿ ಆರೋಪಿಯದ್ದಾಗಿರುತ್ತದೆ. ನಿಪಿ-1 ರಂತಹ ಚೆಕ್ ನಲ್ಲಿರುವ

-8-

ಬರವಣಿಗೆ ಮತ್ತು ಸಹಿ ಬೇರೆ ಬೇರೆ ಶಾಹಿಯಿಂದ ಬರೆಯಲಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-1 ರ ಮೇಲಿರುವ ದಿನಾಂಕ, ಬರವಣಿಗೆ ಮತ್ತು ಆರೋಪಿಯ ಸಹಿ ಬೇರೆ ಬೇರೆ ಶಾಹಿಯಿಂದ ಬರೆಯಲಾಗಿದೆ ಎಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ

**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ./20**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | | ಡಿಡಬ್ಲ್ಯೂ | |
| ತಂದೆಃಗಂಡನ ಹೆಸರು | : | | | |
| ವಯಸ್ಸು | : | ವರ್ಷ | | |
| ಉದ್ಯೋಗ | : | | | |
| ವಾಸ ಸ್ಥಳ | : | | | |

**ದಿನಾಂಕ:05.11.2024 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ. ವಕೀಲರಿಂದಃ**

.

**ಪಾಟೀ ಸವಾಲುಃ ಪಿರ್ಯಾದಿದಾರರ ಪರ ಶ್ರೀ. ವಕೀಲರಿಂದಃ**

.

**(ಪಿರ್ಯಾದಿದಾರರ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್